1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಅಥಣಿ

ಸಿ.ಸಿ. ನಂಃ 2362/2022

| | | | |
|---|---|---|---|
| ಫಿರ್ಯಾದುದಾರರು | - | 1) | ಕರ್ನಾಟಕ ರಾಜ್ಯ,<br>ಐಗಳಿ ಪೋಲಿಸರಿಂದ,<br>- ವಿರುದ್ದ- |
| ಆರೋಪಿತರ | - | 1) | ಶ್ರೀ ಮುತ್ತಣ್ಣ ಬಸಪ್ಪಾ ಕಾಂಬಳೆ, |

**ದೋಷರೋಪಣೆ**

ನಾನು ಶ್ರೀ ಓಂಕಾರ ಮೂರ್ತಿ, ಬಿ.ಕಾಂ., ಎಲ್.ಎಲ್.ಬಿ, 1ನೇ ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ಜೆ.ಎಮ್.ಎಫ್.ಸಿ. ಅಥಣಿ, ಈ ಮೂಲಕ ಆರೋಪಿತನ ಮೇಲೆ ಮಾಡಿದ ದೋಷರೋಪಣೆ ಏನೆಂದರೆ,

| | | |
|---|---|---|
| ಆರೋಪಿಃ | 1) | ಶ್ರೀ ಮುತ್ತಣ್ಣ ಬಸಪ್ಪಾ ಕಾಂಬಳೆ,<br>ವಯಾಃ 37 ವರ್ಷ, ಉದ್ಯೋಗಃ ಶೇತ್ಕಿ,<br>ಸಾಃ ಕೊಡಗಾನೂರ, ತಾಃ ಅಥಣಿ. |

ಈ ಕೆಳಗಿನಂತೆ ದೋಷಾರೋಪಣೆಯನ್ನು ಹೊರೆಸಿದ್ದೇನೆ.

ದಿನಾಂಕ 01-03-2022 ರಂದು ಸಮಯ ಮದ್ಯಹ್ನಾ 03-10 ಗಂಟೆಗೆ ಐಗಳಿ ಪೋಲಿಸ ಠಾಣಾ ಸರಹದ್ದಿನ, ಕೊಡಗಾನೂರ ಗ್ರಾಮದ ಹದ್ದಿಯ ಅಂಬೇಡ್ಕರ ಸರ್ಕಲ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ, ಆರೋಪಿಯಾದ ನೀವು ಅಭಕಾರಿ ಕಾಯ್ದೆ ನಿಯಮಗಳನ್ನು ಉಲ್ಲಂಘಿಸಿ, ಯಾವುದೇ ಪರವಾನಿಗೆ ಇಲ್ಲದೆ, ಅಕ್ರಮವಾಗಿ ಓರಿಜಿನಲ ಚಾಯಿಸ ಡಿಲಕ್ಸ ಕಂಪನಿಯ 90 ML ನ 47 ಟೇಟ್ರಾ ಪ್ಯಾಕೇಟಗಳನ್ನು ನಿಮ್ಮ ವಶದಲ್ಲಿ ಇಟ್ಟುಕೊಂಡು ಮಾರಾಟ ಮಾಡುತ್ತಿರುವಾಗ ಸಿಕ್ಕು, ಆ ಮೂಲಕ ಕನಾರ್ಟಕ ಅಭಕಾರಿ ಕಾಯ್ದೆ ಕಲಂಃ 32 ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ?

ಅದೇ ದಿನ, ಅದೇ ಸ್ಥಳ ಮತ್ತು ಅದೇ ವೇಳೆಯಲ್ಲಿ, ಕಾನೂನು ಬಾಹಿರವಾಗಿ ತಂದಿರುವ ಮದ್ಯದ ಪ್ಯಾಕೇಟಗಳು ಎಂದು ಗೊತ್ತಿದ್ದರು ಸಹ ಸದರೀ ಮೇಲೆ ಹೇಳಿದ ಟೇಟ್ರಾ ಪ್ಯಾಕೇಟಗಳನ್ನು ನಿಮ್ಮ ವಶದಲ್ಲಿ ಇಟ್ಟುಕೊಂಡಿದ್ದಿರಿ ಮತ್ತು ಆ ಮೂಲಕ ಕರ್ನಾಟಕ ಅಭಕಾರಿ ಕಾಯ್ದೆ ಕಲಂಃ 34 ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ?

ಮೇಲಿನ ಆರೋಪಣೆಗೆ ನೀವು ಈ ನ್ಯಾಯಾಲಯದ ಮುಂದೆ ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತೇನೆ.

ಓ.ಹ್ಯೇ.ಕೇ.ಸರಿ ಇದೆ.

ದಿನಾಂಕಃ 14.02.2025

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಅಥಣಿ